## ಸಮುದ್ರ ಮಥನ




### ವಿವರವಾದ ಮಾಹಿತಿ

'ಮಕ್ಕಳೊಡನೆ ಮಾತನಾಡಿ' (ಸುಧಾ, ಜುಲೈ 9) ಡಾ.ಕೆ.ಎಸ್. ಪವಿತ್ರ ಅವರ ಮುಖಪುಟ ಲೇಖನದಲ್ಲಿ ಯಾವ ವಯಸ್ಸಿನ ಮಕ್ಕಳೊಡನೆ ಪೋಷಕರು ಯಾವ ರೀತಿ ಮಾತನಾಡಬೇಕು, ಮಕ್ಕಳೊಡನೆ ಒಡನಾಟ ಹೇಗಿರಬೇಕು ಎಂಬುದನ್ನು ಲೇಖಕರು ವಿವರವಾಗಿ ತಿಳಿಸಿದ್ದಾರೆ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ, ಬಿ.ಎಸ್. ರಮೇಶ್ ಬೆಳ್ಳಾವೆ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಅಪ್ಪಂದಿರು ಓದಬೇಕಾದ ಲೇಖನ

ಮುಖಪುಟ ಲೇಖನ ಮಕ್ಕಳೊಡನೆ ಮಗುವಾಗಬೇಕು ಎಂಬ ಉತ್ತಮ ಸಲಹೆ ನೀಡಿದೆ. 'ನನ್ನ ಮಕ್ಕಳು ನನ್ನನ್ನು ಕಂಡರೆ ಈಗಲೂ ಹೆದರುತ್ತಾರೆ' ಎಂದು ಹೆಮ್ಮೆಯಿಂದ ಹೇಳುವ ಅಪ್ಪಂದಿರು ಅವಶ್ಯವಾಗಿ ಓದಬೇಕಾದ ಲೇಖನವಿದು.

ಮಕ್ಕಳು ಹೇಳಬೇಕಾದುದನ್ನು ಅಪ್ಪನಲ್ಲಿ ನೇರವಾಗಿ ಹೇಳದೆ ಅಮ್ಮನ ಮೂಲಕ ತಲುಪಿಸುವ ವಾತಾವರಣ ಸೃಷ್ಟಿ ಮಾಡಿರುವ ಅಪ್ಪಂದಿರು ಮಕ್ಕಳೊಡನೆ ಹೇಗೆ ವರ್ತಿಸಬೇಕು ಎನ್ನುವುದನ್ನು ಲೇಖನ ತಿಳಿಸಿದೆ.

-ಎ. ಅಬೂಬಕ್ಕರ್ ಅನಿಲಕಟ್ಟೆ, ವಿಟ್ಲ

### ಸಮಯವೆಲ್ಲಿದೆ?

ಬೆಂಗಳೂರಿನಂಥ ಯಾಂತ್ರಿಕ ಜೀವನದ ಒತ್ತಡದಲ್ಲಿ ಹೆಂಡತಿ ಜೊತೆ ಮಾತನಾಡಲೂ ಸಮಯವಿಲ್ಲ. ಇನ್ನು ಮಕ್ಕಳ ಜೊತೆ ಮಾತನಾಡಲು ಸಮಯವೆಲ್ಲಿದೆ?

-ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

### ಸಕಾಲಿಕ

'ಹೊಸ ಕನಸುಗಳ ಮಹಿಳಾ ಪ್ರಾತಿನಿಧ್ಯ', (ರಘುನಾಥ ಚ.ಹ.) 'ನಿಮ್ಮೊಡನೆ' ಬರಹ ಸಕಾಲಿಕವಾಗಿದೆ.

-ಎಂ.ಜಿ. ರಾಮಚಂದ್ರ, ಮಂಡಗಳಲೆ

### ಜನಪ್ರಿಯ ಕಬಡ್ಡಿ ಆಟ

'ಕಬಡ್ಡಿಗೊಂದು ಕಾಲ' (ಗಿರೀಶ್ ದೊಡ್ಮನಿ) ಲೇಖನ ಕಬಡ್ಡಿಯ ಆಟದ ಜನಪ್ರಿಯತೆ ಹೆಚ್ಚುತ್ತಿರುವುದನ್ನು ವಿವರವಾಗಿ ತಿಳಿಸಿದೆ.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ಸೊಗಸಾದ ಪ್ರವಾಸ

'ಬಾದಶಹ ಅಕ್ಬರನ ಸಿಕಂದ್ರಾ' (ವಸುಂಧರಾ ಎಸ್. ಕುಮಾರ್) ಪ್ರವಾಸ ಲೇಖನ ಸೊಗಸಾಗಿದೆ.

- ಎಚ್. ಆನಂದಕುಮಾರ್, ಚಿತ್ರದುರ್ಗ

### ಮಾರ್ಮಿಕ ಕಥೆ

'ಕಂಗಳು ವಂದನೆ ಹೇಳಿವೆ' (ಸಿ.ಎಸ್. ನಾಗೇಶ್ ಕುಮಾರ್) ಕಥೆ ಮಾರ್ಮಿಕವಾಗಿದೆ.

-ಜಯಲಕ್ಷ್ಮಿ, ಮೈಸೂರು, ಕೊಹಿಮ, ಬಸರಕೋಡು, ರಾಜಶೇಖರ ಹಾದಿಮನಿ, ಧಾರವಾಡ

### ಉತ್ತಮ ಸಂದೇಶ

ಕಾರ್ಡ್ ಕಥೆ 'ಅಪಾರ್ಥ' (ಎಸ್ಸೆನ್ಕೆ ಕಡೂರು) ಉತ್ತಮ ಸಂದೇಶ ಸಾರುತ್ತದೆ.

-ನಾರಾಯಣ ಯಾಜಿ ಶಿರಾಲಿ

### ಬೇಷ್ ಅನ್ನೆಟ್ಟೆ!

ವಂಡರ್‌ಪುಟದಲ್ಲಿ 'ಕಲೆಗೆ ಬೆರಳಿನ ಹಂಗಿಲ್ಲ' ಬರಹದಲ್ಲಿ ಕಲಾವಿದೆ ಅನ್ನೆಟ್ಟೆ ಬಗ್ಗೆ ಓದಿ ಹೆಮ್ಮೆ ಅನಿಸಿತು. ಬೇಷ್ ಅನ್ನೆಟ್ಟೆ..!

- ಎಚ್.ಆರ್.ದೇಸಾಯಿ, ರಾಯಚೂರು, ಸುಂದರ್, ಬೆಂಗಳೂರು





